## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಕೆ.ಪಿ.ಶ್ರೀಕಂಠಯ್ಯ ಸ್ಮಾರಕ ವಿದ್ಯಾ ಸಂಸ್ಥೆ, ಕನಕಪುರ ಇವರಿಗೆ ಡಿಪ್ಲೊಮಾ ಇನ್ ಲ್ಯಾಬೊರೇಟರಿ ಹಾಗೂ ಓ.ಟಿ.ಟೆಕ್ನೀಷಿಯನ್ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.

---

ಓದಲಾಗಿದೆ:

ಪೀಠಾಧಿಪತಿಗಳು ಪ್ಯಾರಾಮೆಡಿಕಲ್ ಬೋರ್ಡ್ ಮತ್ತು ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: ಪ್ಯಾರಾಮೆಡಿಕಲ್ ಬೋರ್ಡ್:3:97-98, ದಿನಾಂಕ 6-3-98.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ 6-3-98ರ ಪತ್ರದಲ್ಲಿ ಪೀಠಾಧಿಪತಿಗಳು, ಪ್ಯಾರಾಮೆಡಿಕಲ್ ಬೋರ್ಡ್ ಹಾಗೂ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ ಇವರು ಕೆ.ಪಿ.ಶ್ರೀಕಂಠಯ್ಯ ಸ್ಮಾರಕ ವಿದ್ಯಾ ಸಂಸ್ಥೆ ಕನಕಪುರ ಇವರಿಗೆ ಡಿಪ್ಲೊಮಾ ಇನ್ ಲ್ಯಾಬೊರೇಟರಿ ಟೆಕ್ನೀಷಿಯನ್ ಕೋರ್ಸ್ ಹಾಗೂ ಡಿಪ್ಲೊಮಾ ಇನ್ ಓ.ಟಿ ಟೆಕ್ನೀಷಿಯನ್ ಕೋರ್ಸ್‌ಗಳನ್ನು ತಲಾ 20 ವಿದ್ಯಾರ್ಥಿಗಳ ಪ್ರವೇಶ ಸಾಮರ್ಥ್ಯದೊಂದಿಗೆ ಪ್ರಾರಂಭಿಸಲು ಅನುಮತಿ ನೀಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆ. ಆದುದರಿಂದ ಈ ಆದೇಶ

ಸರ್ಕಾರಿ ಆದೇಶ ಸಂಖ್ಯೆ: ಆಕುಕ 64 ಎಂಎಂಇ 98, ಬೆಂಗಳೂರು, ದಿನಾಂಕ: 21ನೇ ಆಗಸ್ಟ್ 1998.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಸರ್ಕಾರವು ಕೆ.ಪಿ.ಶ್ರೀಕಂಠಯ್ಯ ಸ್ಮಾರಕ ವಿದ್ಯಾ ಸಂಸ್ಥೆ, ಕನಕಪುರ ಇವರಿಗೆ 1998-99ನೇ ಸಾಲಿನಿಂದ ಜಾರಿಗೆ ಬರುವಂತೆ ಡಿಪ್ಲೊಮಾ ಇನ್ ಲ್ಯಾಬೊರೇಟರಿ ಟೆಕ್ನೀಷಿಯನ್ ಕೋರ್ಸ್ ಹಾಗೂ ಡಿಪ್ಲೊಮಾ ಇನ್ ಓ.ಟಿ ಟೆಕ್ನೀಷಿಯನ್ ಕೋರ್ಸುಗಳನ್ನು ತಲಾ 20(ಇಪ್ಪತ್ತು) ವಿದ್ಯಾರ್ಥಿಗಳ ಪ್ರವೇಶ ಸಾಮರ್ಥ್ಯದೊಂದಿಗೆ ಈ ಕೆಳಕಂಡ ಷರತ್ತುಗಳನುಸಾರ ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ನೀಡಿದೆ.

1) ಸದರಿ ಕೋರ್ಸುಗಳಿಗೆ ಪ್ರವೇಶವನ್ನು ಪ್ರತಿವರ್ಷ ಆಗಸ್ಟ್ ಮಾಹೆಯಲ್ಲಿ ಅಂತ್ಯಗೊಳಿಸಿ ಆಯ್ಕೆಗೊಂಡಿದ್ದ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ಯಾರಾಮೆಡಿಕಲ್ ಬೋರ್ಡಿಗೆ ಪ್ರತಿವರ್ಷ ಸೆಪ್ಟೆಂಬರ ಮಾಹೆಯಲ್ಲಿ ಸಲ್ಲಿಸತಕ್ಕದ್ದು.

2) ಕೋರ್ಸುಗಳನ್ನು ಪ್ರಾರಂಭ ಮಾಡುವ ಮೊದಲು ಸಂಯೋಜನೆ ಶುಲ್ಕದ ರೂಪದಲ್ಲಿ ರೂ.20,000-00ಗಳನ್ನು ಹಾಗೂ ಸಂಯೋಜನೆ ನವೀಕರಣಕ್ಕಾಗಿ ರೂ.5,000-00ಗಳನ್ನು ಪ್ಯಾರಾಮೆಡಿಕಲ್ ಬೋರ್ಡಿಗೆ ಸಂದಾಯ ಮಾಡತಕ್ಕದ್ದು.

3) ಸಂಸ್ಥೆಯು ಪ್ಯಾರಾಮೆಡಿಕಲ್ ಬೋರ್ಡ್ ನಿಗದಿಪಡಿಸಿದ ನಿಯಮ ಹಾಗೂ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಹಾಗೂ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ವಯೋಮಿತಿ, ಅರ್ಹತೆ, ಕೋರ್ಸಿನ ಅವಧಿ, ಪಠ್ಯಕ್ರಮ ಮತ್ತು ಪರೀಕ್ಷಾ ಕ್ರಮ ಹಾಗೂ ಇತರೆ ನಿಯಮಗಳನ್ನು ಚಾಚೂತಪ್ಪದೇ ಪಾಲಿಸತಕ್ಕದ್ದು.

4) ಕೋರ್ಸಿನ ಅಂತ್ಯದಲ್ಲಿ ಪ್ಯಾರಾಮೆಡಿಕಲ್ ಕೋರ್ಸುಗಳನ್ನು ನಡೆಸುತ್ತಿರುವ ಸಂಸ್ಥೆಗಳ ವಿದ್ಯಾರ್ಥಿಗಳನ್ನು ಪ್ಯಾರಾಮೆಡಿಕಲ್ ಬೋರ್ಡ್‌ನ ವತಿಯಿಂದ ಪರೀಕ್ಷೆಗೆ ಒಳಪಡಿಸತಕ್ಕದ್ದು.

5) ಮಂಜೂರಾತಿ ನೀಡಿದ ಪ್ರವೇಶ ಮಿತಿಗಿಂತ ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರವೇಶ ನೀಡತಕ್ಕದ್ದಲ್ಲ.

6) ಸದರಿ ಸಂಸ್ಥೆಗೆ ಮಂಜೂರಾದ ಕೋರ್ಸಿನ ಬಗ್ಗೆ ಸದರಿ ಸಂಸ್ಥೆಯು ಹೊಂದಿರುವ ಮೂಲಭೂತ ಸೌಕರ್ಯ, ಬೋಧಕ ಸಿಬ್ಬಂದಿ ಹಾಗೂ ಇತರೆ ಸೌಲಭ್ಯಗಳ ಬಗ್ಗೆ ವಿದ್ಯಾರ್ಥಿಗಳ ಮೊದಲ ವರ್ಷದ ಪರೀಕ್ಷೆಯನ್ನು ತೆಗೆದುಕೊಳ್ಳುವ ಸಮಯದಲ್ಲಿ ಪ್ಯಾರಾಮೆಡಿಕಲ್ ಬೋರ್ಡ್ ಸದರಿ ಸಂಸ್ಥೆಯನ್ನು ಎರಡನೇ ಬಾರಿಗೆ ತಪಾಸಣೆ ಮಾಡುವ ಷರತ್ತಿಗೆ ಈ ಮಂಜೂರಾತಿ ಒಳಪಟ್ಟಿರುತ್ತದೆ.

7) ಪ್ರತಿ ತಪಾಸಣೆಗೆ ಸಂಸ್ಥೆಯು ರೂ.5,000-00ಗಳನ್ನು ಪ್ಯಾರಾಮೆಡಿಕಲ್ ಬೋರ್ಡಿಗೆ ಪಾವತಿ ಮಾಡತಕ್ಕದ್ದು.

8) ಸರ್ಕಾರದಿಂದ ಯಾವುದೇ ಆರ್ಥಿಕ ಸಹಾಯ ಅಥವಾ ಅನುದಾನವನ್ನು ಈ ಕೋರ್ಸಿನ ಸಲುವಾಗಿ ನೀಡಲಾಗುವುದಿಲ್ಲ.

9) ಸಂಸ್ಥೆಯವರು ಈ ಬಗ್ಗೆ ರಚಿಸಲಾಗಿರುವ ಪ್ಯಾರಾಮೆಡಿಕಲ್ ಬೋರ್ಡಿನಲ್ಲಿ ರಿಜಿಸ್ಟರ್ ಮಾಡಿಸತಕ್ಕದ್ದು ಹಾಗೂ ಪ್ಯಾರಾಮೆಡಿಕಲ್ ಬೋರ್ಡಿನವರು ನಿಗದಿಪಡಿಸಿರುವ ಮಾರ್ಗದರ್ಶನವನ್ನು ಅನುಸರಿಸತಕ್ಕದ್ದು

10) ವಿದ್ಯಾರ್ಥಿಗಳ ವ್ಯಾಸಂಗದ ಹಿತದೃಷ್ಟಿಯಿಂದ ಸುಸಜ್ಜಿತ ತರಗತಿ ಕೊಠಡಿ, ಪ್ರಯೋಗಾಲಯ ಕೊಠಡಿ ಮತ್ತು ವಿದ್ಯಾರ್ಥಿನಿಲಯದ ಸೌಲಭ್ಯಗಳನ್ನು ಹೊಂದತಕ್ಕದ್ದು.

11) ಎಲ್ಲಾ ಪ್ಯಾರಾಮೆಡಿಕಲ್ ಕೋರ್ಸ್‌ಗಳಿಗೆ ಕನಿಷ್ಠ ವಿದ್ಯಾರ್ಹತೆಯು ಪಿ.ಯು.ಸಿ ಯಲ್ಲಿ ತೇರ್ಗಡೆ ಆಗಿರಬೇಕು.

12) ಸಂಸ್ಥೆಯವರಿಗೆ ನಿಗದಿಪಡಿಸಿದ ಸೀಟುಗಳಲ್ಲಿ ಶೇಕಡಾ 20ರಷ್ಟನ್ನು ಸರ್ಕಾರದಿಂದ ಆಯ್ಕೆ ಮಾಡಿದ ಅಭ್ಯರ್ಥಿಗಳನ್ನು ಸೇರಿಸಿಕೊಳ್ಳಲು ಬದ್ಧವಾಗಿರಬೇಕು.

13) ಎಲ್ಲಾ ಪ್ಯಾರಾಮೆಡಿಕಲ್ ಕೋರ್ಸ್‌ಗಳಿಗೆ ಪ್ರವೇಶ ಪಡೆದ ಪ್ರತಿ ವಿದ್ಯಾರ್ಥಿಯಿಂದ ಸರ್ಕಾರ ನಿಗದಿಪಡಿಸುವ ಶುಲ್ಕವನ್ನು ಮಾತ್ರ ಪಡೆಯತಕ್ಕದ್ದು.

14) ಪ್ಯಾರಾಮೆಡಿಕಲ್ ಕೋರ್ಸ್‌ಗಳಿಗೆ ಪ್ರವೇಶ ಪಡೆದ ಪ್ರತಿ ವಿದ್ಯಾರ್ಥಿಯು ರೂ.200-00ನ್ನು ನೋಂದಣಿ ಶುಲ್ಕವಾಗಿ ಪ್ಯಾರಾಮೆಡಿಕಲ್ ಬೋರ್ಡಿಗೆ ಸಲ್ಲಿಸತಕ್ಕದ್ದು.

15) ಪ್ಯಾರಾಮೆಡಿಕಲ್ ಕೋರ್ಸುಗಳಿಗೆ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಪ್ರತಿ ವರ್ಷದ ಜನವರಿ ಅಥವಾ ಜೂನ್ ತಿಂಗಳಲ್ಲಿ ಮಾತ್ರ ಮಾಡತಕ್ಕದ್ದು.

16) ಸಂಸ್ಥೆಯವರು ಕೋರ್ಸ್ ಪ್ರಾರಂಭವಾಗುವ ಪೂರ್ವದಲ್ಲಿ ಬ್ಯಾಂಕ್ ಗ್ಯಾರಂಟಿಯನ್ನು ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಎನ್.ಬಿ.ಪಾಲೇಕರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ(ವೈಶಿ)

ಗೆ:

1) ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಬೆಂಗಳೂರು,
2) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು,
3) ರಿಜಿಸ್ಟ್ರಾರ್, ಕರ್ನಾಟಕ ನರ್ಸಿಂಗ್ ಕೌನ್ಸಿಲ್, ಬೆಂಗಳೂರು,
4) ಕಾರ್ಯದರ್ಶಿ, ಪ್ಯಾರಾಮೆಡಿಕಲ್ ಬೋರ್ಡ್(ವೈದ್ಯಕೀಯ ಶಿಕ್ಷಣ), ಆನಂದರಾವ್ ಸರ್ಕಲ್, ಬೆಂಗಳೂರು,
5) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು,
6) ಕಾರ್ಯದರ್ಶಿ:ಅಧ್ಯಕ್ಷರು, ಶ್ರೀ ಕೆ.ಪಿ.ಶ್ರೀಕಂಠಯ್ಯ ಸ್ಮಾರಕ ಸಂಸ್ಥೆ, ಎಂ.ಜಿ.ರಸ್ತೆ, ಕನಕಪುರ, ಬೆಂಗಳೂರು ಗ್ರಾಮಾಂತರ,
7) ಕಾರ್ಯದರ್ಶಿ ಮತ್ತು ಉಪಕಾರ್ಯದರ್ಶಿ(ವೈಶಿ)ರವರ ಆಪ್ತ ಸಹಾಯಕರುಗಳು, ಆಕುಕ ಇಲಾಖೆ, ಬೆಂಗಳೂರು
8) ಶಾಖಾ ರಕ್ಷಾ ಕಡತ : ಹೆಚ್ಚಿನ ಪ್ರತಿಗಳು